**ದಿಃ04.12.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಕೆ.ಪಿ.ಬಿ. ವಕೀಲರಿಂದಃ** ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಅಂಶಗಳನ್ನು ತಾನೇ ಹೇಳಿ ಬರೆಸಿರುವುದಾಗಿ ಮತ್ತು ಸತ್ಯವಾಗಿದೆ ಎಂದು ನುಡಿದಿದ್ದಾರೆ.

2 ದೃಢೀಕೃತ ಕ್ರಯ ಪತ್ರಗಳನ್ನು ಹಾಜರುಪಡಿಸಿದ್ದು , ಅದನ್ನು ನಿಪಿ 1 ಮತ್ತು ನಿಪಿ 2 ಎಂದು, 2 ಹಕ್ಕು ಬದಲಾವಣೆ ವಹಿಗಳನ್ನು ನಿಪಿ 3 ಮತ್ತು ನಿಪಿ 4 ಎಂದು, ಒಂದು ಜಮಾ ಬಂದಿಯನ್ನು ನಿಪಿ 5 ಎಂದು, 38 ವಿದ್ಯುತ್ ಬಿಲ್ಲುಗಳು ಮತ್ತು ಹಣ ಸಂದಾಯ ರಶೀದಿಗಳನ್ನು ಒಟ್ಟಾಗಿ ನಿಪಿ 6 ಎಂದು, 13 ಕಂದಾಯ ರಶೀದಿಗಳನ್ನು ಒಟ್ಟಾಗಿ ನಿಪಿ 7 ಎಂದು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯವರು ನೀಡಿರುವ 2 ಪತ್ರಗಳನ್ನು ನಿಪಿ 8 ಮತ್ತು ನಿಪಿ 9 ಎಂದು, 3 ಜಮಾ ಬಂದಿಗಳನ್ನು ನಿಪಿ 10 ರಿಂದ ನಿಪಿ 12 ಎಂದು, 2 ನೋಟೀಸ್ ಗಳನ್ನು ನಿಪಿ 13 ಮತ್ತು ನಿಪಿ 14 ಎಂದು, ಆಕಾಶವಾಣಿಯವರು ನೀಡಿರುವ ನೋಟೀಸ್ ನ್ನು ನಿಪಿ 15 ಎಂದು, ಒಂದು ಜಮಾ ಬಂದಿಯನ್ನು ನಿಪಿ 16 ಎಂದು, ಒಂದು ತಗಾದೆ ನೋಟೀಸ್ ನ್ನು ನಿಪಿ 17 ಎಂದು, ಸಾಗುವಳಿ ಚೀಟಿಯನ್ನು ನಿಪಿ 18 ಎಂದು, ಜಮಾ ಬಂದಿಯನ್ನು ನಿಪಿ 19 ಎಂದು, ಆದಾಯ ತೆರಿಗೆ ಇಲಾಖೆಯವರು ನೀಡಿರುವ ಪತ್ರವನ್ನು ನಿಪಿ 20 ಎಂದು, ವಾಸಸ್ಥಳ ದೃಢೀಕರಣ ಪತ್ರವನ್ನು ನಿಪಿ 21 ಎಂದು, ಆದಾಯ ಮತ್ತು ಖರ್ಚುಗಳ ಪಟ್ಟಿಯನ್ನು ನಿಪಿ 22 ಎಂದು, ಜಿಲ್ಲಾಧಿಕಾರಿಯವರು ನೀಡಿರುವ ಪತ್ರವನ್ನು ನಿಪಿ 23 ಎಂದು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯವರು ನೀಡಿರುವ ಹಿಂಬರಹವನ್ನು ನಿಪಿ 24 ಎಂದು, 2 ಕಂದಾಯ ರಶೀದಿಗಳನ್ನು ನಿಪಿ 25 ಮತ್ತು ನಿಪಿ 26 ಎಂದು, ಶ್ರೀರಾಮ್ ಫೈನಾನ್ಸ ರವರು ನೀಡಿರುವ ನೋಟೀಸ್ ನ್ನು ನಿಪಿ 27 ಎಂದು , 2 ದೃಢೀಕೃತ ಕ್ರಯ ಪತ್ರಗಳನ್ನು ನಿಪಿ 28 ಮತ್ತು ನಿಪಿ 29 ಎಂದು, 6 ಋಣಭಾರ ರಾಹಿತ್ಯ ಪ್ರಮಾಣ ಪತ್ರಗಳನ್ನು ನಿಪಿ 30 ರಿಂದ ನಿಪಿ 35 ಎಂದು, ವಕೀಲರ ಕಛೇರಿ ತಿಳುವಳಿಕೆ ಪತ್ರವನ್ನು ನಿಪಿ 36 ಎಂದು, 3 ಅಂಚೆ ಸ್ವಿಕೃತಿ ಬಾಕಿಗಳನ್ನು ನಿಪಿ 37 ರಿಂದ ನಿಪಿ 39 ಎಂದು, 2 ಋಣಭಾರ ರಾಹಿತ್ಯ ಪ್ರಮಾಣ ಪತ್ರಗಳನ್ನು ನಿಪಿ 40 ಮತ್ತು ನಿಪಿ 41 ಎಂದು, ಒಂದು ದಿನ ಪತ್ರಿಕೆಯನ್ನು ನಿಪಿ 42 ಎಂದು, 3 ಆರ್ ಟಿ ಸಿ ಗಳನ್ನು ನಿಪಿ 43 ರಿಂದ ನಿಪಿ 45 ಎಂದು, 15 ಕಂದಾಯ

ರಶೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ 46 ರಿಂದ ನಿಪಿ 60 ಎಂದು, 20 ದೂರವಾಣಿ ಬಿಲ್ಲುಗಳನ್ನು ಹಾಜರುಪಡಿಸಿದ್ದು , ಅವುಗಳನ್ನು ಒಟ್ಟಾಗಿ ನಿಪಿ 61 ಎಂದು, 1 ಪಾಸ್ ಪೋರ್ಟ್ ಗಳನ್ನು ನಿಪಿ 62 ಎಂದು, 2 ಬಂದೂಕು ಪರವಾನಿಗೆಗಳನ್ನು ನಿಪಿ 63 ಮತ್ತು ನಿಪಿ 64 ಎಂದು ಗುರುತಿಸಲಾಯಿತು.

ವಕೀಲರ ಕೋರಿಕೆ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ನೀಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಸಹಿ/-

(ವಿಜಯಕುಮಾರ್)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.